ದಿ: 28.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ವಿ.ಆರ್.ಕೆ. ವಕೀಲರಿಂದ:-**

1. ಎದುರುದಾರರು ಈ ಅರ್ಜಿಯಲ್ಲಿ ಏನು ತಕರಾರು ಸಲ್ಲಿಸಿರುತ್ತಾರೆ ಎಂದು ನಾನು ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ನಾನು ಈ ಪ್ರಕರಣದಲ್ಲಿ ನನ್ನ 4 ಜನ ಸಹೋದರಿಯರ ಪರ ಸಹ ಸಾಕ್ಷ್ಯಾ ನುಡಿಯುತ್ತಿದ್ದೇನೆ. ನನ್ನ ತಂಗಿ ವಿನೋದ ರವರನ್ನು ನಾನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಆಕೆ ಮೃತ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆಕೆಯ ವಾರಸ್ಸುದಾರರನ್ನು ನಾನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ತೋರಿಸಿಲ್ಲ ಎಂದರೆ ಸರಿ. ಸದರಿ ಓ.ಎಸ್ .198/2017 ದಾವೆಯನ್ನು ನಾವು ಖುದ್ದು ನೆಡೆಸುತ್ತಿದ್ದೆವು. ಸದರಿ ದಾವೆಗೆ ನಾವು ಹಾಜರಾಗದ ಕಾರಣ ದಿನಾಂಕ 17.01.2024 ಅದು ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ದಾವೆಯ ಯಾವುದೇ ದಿನಾಂಕಗಳಲ್ಲಿ ನಾವು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯ ದಿನಾಂಕಗಳನ್ನು ನಮ್ಮ ವಕೀಲರು ನಮಗೆ ತಿಳಿಸುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ವಕೀಲರು ಸದರಿ ದಾವೆಯಲ್ಲಿ ನ್ಯಾಯಾಲಯದ ಮುಂದೆ ಹಾಜರಾಗುವಂತೆ ನಮಗೆ ಎಂದು ತಿಳಿಸಿರುವುದಿಲ್ಲ. ನಮ್ಮ ವಕೀಲರೊಂದಿಗೆ ನನ್ನ ತಂಗಿಯರ ಪರ ಸಹ ನಾನೇ ವ್ಯವಹರಿಸುತ್ತಿದ್ದೆನು. ಸದರಿ ದಾವೆ ವಜಾ ಆದ ಸುಮಾರು ಒಂದು ವರ್ಷದ ನಂತರ ಸದರಿ ಸಂಗತಿ ನಮಗೆ ತಿಳಿಯಿತು. ಸದರಿ ಸಂಗತಿಯನ್ನು ನಮಗೆ ನಮ್ಮ ವಕೀಲರೆ ತಿಳಿಸಿರುತ್ತಾರೆ. ಸದರಿ ದಾವೆಯ ದಾಖಲೆಗಳನ್ನು ನಾವು ಬೇರೆ ವಕೀಲರ ಮುಲಕ ಪಡೆದು ಈ ಅರ್ಜಿ ಸಲ್ಲಿಸಿರುತ್ತೇವೆ. ಸದರಿ ದಾಖಲೆಗಳನುನ ಕೋರಿ ನಾವು ಯಾವ ದಿನಾಂಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತೇವೆ ಎಂದು ನನಗೆ ನೆನಪಲ್ಲ. ನಾವು ಅರ್ಜಿ ಸಲ್ಲಿಸಿದ ಎಷ್ಟು ದಿನಗಳ ನಂತರ ನಮಗೆ ಸದರಿ ದಾಖಲೆಗಳು ದೊರೆತಿರುತ್ತವೆ ಎಂದು ನನಗೆ ಹೇಳಲು ಆಗುವುದಿಲ್ಲ್. ಸದರಿ ದಾಖಲೆಗಳನ್ನು ಪಡೆದ ಎಷ್ಟು ದಿವಸದ ನಂತರ ನಾವು ಈ ಅರ್ಜಿ ಸಲ್ಲಿಸಿರುತ್ತೇವೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾವು ಸಕಾಲದಲ್ಲಿ ಈ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸುವಲ್ಲಿನ ವಿಳಂಬವನ್ನು ನಾವು ನಮ್ಮ ಅರ್ಜಿಯಲ್ಲಿ ಸೂಕ್ತವಾಗಿ ವಿವರಿಸಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದಿನಾಂಕ 18.10.2021 ರಿಂದ ದಿನಾಂಕ 17.01.2024 ರವರೆಗೆ ನಾವು ನ್ಯಾಯಾಲಯಕ್ಕೆ ಯಾವ ಕಾರಣ ಹಾಜರಾಗಿಲ್ಲ ಎಂಬ ಸಂಗತಿಯನ್ನು ಸಹ ಸೂಕ್ತವಾಗಿ ನಮ್ಮ ಅರ್ಜಿಯಲ್ಲಿ ವಿವರಿಸಿಲ್ಲ ಎಂದರೆ ಸರಿಯಲ್ಲ. ಈ ಅರ್ಜಿ ಸಲ್ಲಿಸಲು ಯಾವುದೇ

ಸಕಾರಣ ಇಲ್ಲದೆ ಇದ್ದರು ಎದುರುದಾರರಿಗೆ ತೊಂದರೆ ನೀಡಲು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**